c) No work is completed so far.

ಅರಣ್ಯ ಕಾಡಾನೆಗಳ ಹಾವಳಿ ತಡೆಯಲು ಕಂದಕಗಳ ನಿರ್ಮಾಣ.

61(50)

ಶ್ರೀ ಮಹದೇವ ಪ್ರಸಾದ್ ಹೆಚ್.ಎಸ್.(ಗುಂಡ್ಲುಪೇಟೆ): ಮಾನ್ಯ ಅರಣ್ಯ ಮತ್ತು ಜೀವಿ ಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಗುಂಡ್ಲುಪೇಟೆ ತಾಲ್ಲೂಕಿನ ಅರಣ್ಯದ ಅಂಚಿನ ಪ್ರದೇಶದಲ್ಲಿ ಕಾಡಾನೆಗಳ ಹಾವಳಿ ತಡೆಯಲು ಆನೆ ತಡೆ ಕಂದಕ ನಿರ್ಮಿಸಲಾಗುತ್ತಿದೆಯೆ?

ಆ) ಈವರೆಗೆ ಎಷ್ಟು ಕಿ.ಮೀ. ದೂರದವರೆಗೆ ತೋಡಲಾಗಿದೆ?

ಇ) ಈ ಕಾರ್ಯಕ್ಕೆ ಮಾಡಿರುವ ವೆಚ್ಚ ಎಷ್ಟು?

ಈ) ಸರ್ಕಾರವು ಆನೆ ತಡೆ ಕಂದಕದ ಪಕ್ಕದಲ್ಲೇ ಸೌರಶಕ್ತಿ ತಂತಿ ಬೇಲಿ ನಿರ್ಮಿಸಲು ಉದ್ದೇಶಿಸಿದೆಯೇ?

ಶ್ರೀ ಕೆ.ಹೆಚ್.ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವ ಶಾಸ್ತ್ರ ಸಚಿವರು):

ಅ) ಹೌದು.

ಆ) 1) ಆನೆ ತಡೆ ಕಂದಕ (ಪೂರ್ಣಗೊಂಡಿರುವುದು) - 55.55

2) ಆನೆ ತಡೆ ಕಂದಕ ಕೆಲಸ (ಪ್ರಗತಿಯಲ್ಲಿರುವುದು) - 4.00 ಕಿ.ಮಿ.

ಇ) ರೂ. 1, 19, 76, 485.00

ಈ) ಇಲ್ಲ.

ನೂತನ ಜಿಲ್ಲಾ ನ್ಯಾಯಾಲಯಗಳು

62(362)

ಶ್ರೀ ಪಾಟೀಲ್ ಡಿ.ಆರ್.(ಗದಗ್): ಮಾನ್ಯ ಕಾನೂನು, ಸಂಸದೀಯ

ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ರಾಜ್ಯದಲ್ಲಿ ರಚನೆಗೊಂಡ ನೂತನ ಜಿಲ್ಲೆಗಳಲ್ಲಿ ಗದಗ ಜಿಲ್ಲೆಯನ್ನೊಳಗೊಂಡು ನಾಲ್ಕು ಜಿಲ್ಲೆಗಳಲ್ಲಿ ನೂತನ ಜಿಲ್ಲಾ ನ್ಯಾಯಾಲಯಗಳನ್ನು ಸ್ಥಾಪಿಸಬೇಕೆಂಬ ಸರ್ಕಾರದ ನಿರ್ಧಾರ ಇನ್ನೂ ಕಾರ್ಯಗತಗೊಳ್ಳದಿರಲು ಕಾರಣಗಳೇನು?

ಆ) ಬರುವ ಏಪ್ರಿಲ್ 1ನೇ ದಿನಾಂಕದಿಂದಾದರೂ ಈ ಜಿಲ್ಲಾ ನ್ಯಾಯಾಲಯಗಳನ್ನು ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಡಿ.ಬಿ.ಚಂದ್ರೇಗೌಡ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಸಚಿವರು):

ಅ) ಗದಗ್, ಹಾವೇರಿ, ಬಾಗಲ್‌ಕೋಟೆ, ದಾವಣಗೆರೆ ಜಿಲ್ಲೆಗಳಲ್ಲಿ ನೂತನ ಜಿಲ್ಲಾ ನ್ಯಾಯಾಧೀಶರ ನ್ಯಾಯಾಲಯಗಳ ಸ್ಥಾಪನೆ ಹಾಗೂ ಆ ನ್ಯಾಯಾಲಯಗಳಿಗೆ ಅಗತ್ಯ ಸಿಬ್ಬಂದಿ ಹುದ್ದೆಗಳ ಸೃಜನೆಗೆ ದಿನಾಂಕ 2-12-99ರಂದು ಸರ್ಕಾರದ ಆದೇಶವನ್ನು ಹೊರಡಿಸಲಾಗಿದೆ.

ಆ) ಈ ನ್ಯಾಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿಯನ್ನು ನಿಗದಿಗೊಳಿಸಿ ಶಾಸನ ಬದ್ಧ ಅಧಿಸೂಚನೆಗಳನ್ನು ಹೊರಡಿಸುವ ವಿಷಯವು ಸರ್ಕಾರದ ತೀವ್ರ ಪರಿಶೀಲನೆಯಲ್ಲಿದ್ದು ತ್ವರಿತವಾಗಿ ಅಧಿಸೂಚನೆಗಳನ್ನು ಹೊರಡಿಸಲಾಗುವುದು.

ಗದಗ ಜಿಲ್ಲೆಯಲ್ಲಿನ ರಸ್ತೆ ಕಾಮಗಾರಿ.

63(367)

Sri Patil D.R. (Gadag): Honourable Minister for Public works ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

1) In 3 years of previous Govt. which are the road works taken up in present Gadag Dist. their length, estimated cost, expenditure incurred and the present stage of the works. Furnish Constituency wise details?

2) How many works are approved under RIDF 4 in